ಅಧಿಕಾರಿಗಳು ಮತ್ತು ಅಂತಿಮವಾಗಿ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ನಡೆಸಿದ ಸಭೆಯಲ್ಲಿ ಚರ್ಚೆ ನಡೆಸಿತು.

ಸರ್ಕಾರದ ಕಾಲೇಜುಗಳಿಗೆ ಸ್ವಾಯತ್ತತೆ ನೀಡುವ ಬಗ್ಗೆ

2853 - ಶ್ರೀ ಮಾಟಾಳ್ ನಾಗರಾಜ್ (ಚಾಮರಾಜನಗರ) ; ಮಾನ್ಯ ಶಿಕ್ಷಣ ಮತ್ತ ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಕೆಲವು ಕಾಲೇಜುಗಳಿಗೆ ಸ್ವಯತ್ತತೆ ನೀಡುವ ಬಗ್ಗೆ ಯೋಜಿಸಿದೆಯೇ?

ಆ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳ ವಿವರಗಳನ್ನು ನೀಡುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಹೌದು

ಆ) ವಿಶ್ವವಿದ್ಯಾಲಯಗಳನ್ನು, ಯು.ಜಿ.ಸಿ. ಮಾರ್ಗ ಸೂಚಿಯನ್ನು ಅನುಸರಿಸಿ ಪರಿಷ್ಕೃತ ಕರಡು ಶಾಸನ ರೂಪಿಸಿ ಕುಲಪತಿಗಳ ಒಪ್ಪಿಗೆಗಾಗಿ ಕಳುಹಿಸುವಂತೆ ಕೋರಲಾಗಿದೆ.

ಕಾಲೇಜುಗಳಲ್ಲಿ ಪ್ರವೇಶದ ತೊಂದರೆ ಆಗಿರುವುದರ ಬಗ್ಗೆ

2820 - ಶ್ರೀ ಈಶ್ವರಪ್ಪ ಕೆ.ಎಸ್ (ಶಿವಮೊಗ್ಗ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಬಾರಿ ಕಾಲೇಜುಗಳಲ್ಲಿ ಪ್ರವೇಶ ಸಿಗದೇ ಓದು ನಿಲ್ಲಿಸಿರುವ ವಿದ್ಯಾರ್ಥಿಗಳಿಗೆ ಪ್ರವೇಶ ದೊರಕಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಆ) ಅವರುಗಳಿಗೆ ಯಾವ ಸಾಲಿಗೆ ಪ್ರವೇಸ ದೊರಕಿಸಲಾಗುವುದು?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಪಿಯುಸಿ ತರಗತಿಗೆ ಸೇರ ಬಯಸುವ ಎಲ್ಲಾ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವಂತೆ ಸರ್ಕಾರಿ ಕಾಲೇಜಿನ ಎಲ್ಲಾ ಪ್ರಾಚಾರ್ಯರುಗಳಿಗೆ ಹಾಗೂ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ ಕೂಡಾ ಸೂಕ್ತ ಆದೇಶ ನೀಡಲಾಗಿದೆ ಮತ್ತು ಪ್ರವೇಶ ದೊರಕಿಸಿಕೊಡಲು ಅವಕಾಶ ಮಾಡಿಕೊಡಲಾಗಿದೆ.

ಆ) 1991-92ನೇ ಸಾಲಿಗೆ ಪ್ರವೇಶ ದೊರಕಿಸಲಾಗುವುದು.

ರಾಜ್ಯದ ಬಿ.ಎಡ್. ಕಾಲೇಜುಗಳ ಸಂಖ್ಯೆ ಬಗ್ಗೆ

2821 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಒಟ್ಟು ಬಿ.ಎಡ್. ಕಾಲೇಜುಗಳೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಹೊಸ ಕಾಲೇಜುಗಳನ್ನು ಪ್ರಾರಂಭಿಸುವ ಯೋಜನೆ ಸರ್ಕಾರಕ್ಕಿದೆಯೇ?

ಇ) ಇದ್ದಲ್ಲಿ ಅದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು ಮತ್ತು ಎಲ್ಲೆಲ್ಲಿ ಪ್ರಾರಂಭಿಸಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು)

ಅ) 63

(ಜಿಲ್ಲಾವಾರು ವಿವರ ಅನುಬಂಧದಲ್ಲಿ)

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ವಿಧಾನ ಸಭಾ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 2821ರ ಅನುಬಂಧ
ರಾಜ್ಯದಲ್ಲಿರುವ ಬಿ.ಎಡ್. ಕಾಲೇಜುಗಳ ಜಿಲ್ಲಾವಾರು ಪಟ್ಟಿ

ಕ್ರ. ಸಂ.	ಜಿಲ್ಲೆ	ಕಾಲೇಜುಗಳ ಸಂಖ್ಯೆ
1.	ಬೆಂಗಳೂರು	11
2.	ತುಮಕೂರು	4
3.	ಕೋಲಾರು	3
4.	ಮೈಸೂರು	5
5.	ಮಂಡ್ಯ	1
6.	ಹಾಸನ	4
7.	ಶಿವಮೊಗ್ಗ	1
8.	ಚಿತ್ರದುರ್ಗ	5
9.	ಚಿಕ್ಕಮಗಳೂರು	1
10.	ದಕ್ಷಿಣ ಕನ್ನಡ	3
11.	ಕೊಡಗು	1
12.	ಧಾರವಾಡ	5
13.	ಬೆಳಗಾಂ	4
14.	ಬಿಜಾಪುರ	3
15.	ಉತ್ತರ ಕನ್ನಡ	2
16.	ಗುಲ್ಬರ್ಗಾ	4
17.	ರಾಯಚೂರು	1
18.	ಬೀದರ್	2
19.	ಬಳ್ಳಾರಿ	3
	ಒಟ್ಟು	**63**